ಕುಂಇ 19 ಮುಸಪ್ರ 2009 (ಜಿ.ರಾಮಚಂದ್ರಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಕರ್ನಾಟಕ ವಿಧಾನಸಭೆ
(13ನೇ ವಿಧಾನ ಸಭೆ. 2ನೇ ಅಧಿವೇಶನ)

169

ಧ್ರುವ ನಾರಾಯಣ್ ಆರ್.(ಕೊಳ್ಳೆಗಾಲ)
ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

1. ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಡಲು 2006–07, 2007–08 ಮತ್ತು 2008–09 ರಲ್ಲಿ ಎಷ್ಟು ಹಣವನ್ನು ಬಳಸಲಾಗಿದೆ;

ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳಿಗೆ 2006–07, 2007–08 ಮತ್ತು 2008–09 ರಲ್ಲಿ ಒಟ್ಟು ರೂ.143876.16 ಲಕ್ಷಗಳನ್ನು ಬಳಸಲಾಗಿದೆ. ವಿವರಗಳು ಕೆಳಗಿನಂತಿವೆ:

(ರೂ.ಲಕ್ಷಗಳಲ್ಲಿ)

ವರ್ಷ	ಗ್ರಾಮೀಣ	ನಗರ	ಒಟ್ಟು
2006–07	34780.12	756.26	35536.38
2007–08	58789.02	1123.80	59912.82
2008–09 (31.01.09 ರವರೆಗೆ)	47896.12	530.84	48426.96
ಒಟ್ಟು	**141465.26**	**2410.9**	**143876.16**

2. ಆಶ್ರಯ ಮನೆಗಳ ನಿರ್ಮಾಣಕ್ಕೆ ನಿವೇಶನಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

3. ನಿವೇಶನಗಳ ನಿರ್ಮಾಣಕ್ಕೆ 2008–09ರಲ್ಲಿ ನೀಡಲಾದ ಅನುದಾನ ಎಷ್ಟು;

ನಿವೇಶನಗಳ ನಿರ್ಮಾಣಕ್ಕೆ 2008–09ರ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ರೂ.6245.16 ಲಕ್ಷಗಳ (ನಗರ ನಿವೇಶನಗಳಿಗೆ ರೂ.6068.16 ಲಕ್ಷಗಳು ಮತ್ತು ಗ್ರಾಮೀಣ ನಿವೇಶನಗಳಿಗೆ ರೂ.177 ಲಕ್ಷಗಳು) ಅನುದಾನವನ್ನು ಒದಗಿಸಿದೆ.

4. ವಸತಿ ಹೀನರಿಗೆ ನಿವೇಶನಗಳನ್ನು ಕೊಟ್ಟು, ನಂತರ ಆಶ್ರಯ ಮನೆಗಳ ನಿರ್ಮಾಣಕ್ಕೆ ಅನುದಾನ ನೀಡುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತದೆ.

ನಿವೇಶನ ರಹಿತರಿಗೆ ನಿವೇಶನವನ್ನು ನೀಡಲು ಈಗಾಗಲೇ ಆಶ್ರಯ ನಿವೇಶನ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಯಡಿ ಲಭ್ಯವಿರುವ ಸರ್ಕಾರಿ ಭೂಮಿಯನ್ನು ಆಶ್ರಯ ಯೋಜನೆಗೆ ವರ್ಗಾಯಿಸಿಕೊಂಡು ಬಡಾವಣೆ ರಚಿಸಿ ನಿವೇಶನಗಳನ್ನು ನೀಡಲಾಗುತ್ತಿದೆ. ಒಂದು ವೇಳೆ ಸರ್ಕಾರಿ ಭೂಮಿ ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನುಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ಖರೀದಿಸಿ ನಿವೇಶನಗಳನ್ನು ಒದಗಿಸಲಾಗುತ್ತಿದೆ. ನಿವೇಶನ ಒದಗಿಸಿ ನಂತರ ಸದ್ಯ ಅನುಷ್ಠಾನದಲ್ಲಿರುವ ಗ್ರಾಮೀಣ ಆಶ್ರಯ, ಗ್ರಾಮೀಣ ಅಂಬೇಡ್ಕರ್, ಇಂದಿರಾ ಆವಾಸ್ ಮತ್ತು ನಗರ ಆಶ್ರಯ ಯೋಜನೆಗಳ ಮೂಲಕ ವಸತಿ ಸೌಕರ್ಯ ಕೊಡಬಹುದಾಗಿದೆ. ಇದಲ್ಲದೆ ವಸತಿ ರಹಿತರಿಗೆ ನಿವೇಶನಗಳನ್ನು ವಿತರಿಸಿ, ನಂತರ ವಿತರಿಸಲಾದ ನಿವೇಶನದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು 2006ರಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಆಯ್ಕೆಯಾದ 1200 ಗ್ರಾಮಗಳಲ್ಲಿ ಪ್ರತಿ ಗ್ರಾಮದಲ್ಲಿ ಕನಿಷ್ಟ 10 ಎಕರೆಯಂತೆ ಜಮೀನನ್ನು ಖರೀದಿಸಲು ಸರ್ಕಾರದಿಂದ ಈಗಾಗಲೇ ರೂ.25.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಮೊದಲ ಹಂತದಲ್ಲಿ ನಿವೇಶನಗಳನ್ನು ವಿತರಿಸಿ, ನಂತರ ಮನೆಗಳನ್ನು ನಿರ್ಮಿಸಿಕೊಡುವ ಉದ್ದೇಶ ಹೊಂದಲಾಗಿದೆ.

ಸಂಖ್ಯೆ :ವಇ 25 ಹೆಚ್ಎಎಂ 2009 **(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)**
ವಸತಿ ಹಾಗೂ ಮುಜರಾಯಿ ಸಚಿವರು.

<u>ಕರ್ನಾಟಕ ವಿಧಾನಸಭೆ</u>

170 ಧ್ರುವ ನಾರಾಯಣ್ ಆರ್.(ಕೊಳ್ಳೇಗಾಲ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು